**0101/2041/0423**

**I Semester 3 Yr. LL.B./V Semester 5 Yr. B.A.,LL.B. (Maj.-Min. System)/ B.A.,LL.B./B.B.A.,LL.B./ IV Semester 5 Yr. B.A.,LL.B./B.B.A.,LL.B. Examination, Nov./Dec. 2020**

**CONTRACT – I (Old/New Batch)**

Duration : 3 Hours                                  Max. Marks : 100

**Instructions :** **1. Answer Q. No. 9 and any five of the remaining questions.**

**2. Q. No. 9 carries 20 marks and the remaining questions carry 16 marks each.**

**3. Answer should be written either in English or Kannada completely.**

**ಸೂಚನೆಗಳು :** **೧. ಪ್ರಶ್ನೆ ಸಂಖ್ಯೆ ೯ ನ್ನು ಉತ್ತರಿಸಿರಿ ಹಾಗೂ ಉಳಿದ ಪ್ರಶ್ನೆಗಳಲ್ಲಿ ಯಾವುದೇ ಐದಕ್ಕೆ ಉತ್ತರಿಸಿರಿ.**

**೨. ಪ್ರಶ್ನೆ ಸಂಖ್ಯೆ ೯ ಕ್ಕೆ ೨೦ ಅಂಕಗಳು ಮತ್ತು ಉಳಿದ ಪ್ರತಿ ಪ್ರಶ್ನೆಗೆ ೧೬ ಅಂಕಗಳು.**

**೩. ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲ ಅಥವಾ ಕನ್ನಡ ಭಾಷೆಯಲ್ಲಿಯೇ ಬರೆಯಬೇಕು.**

Q. No. 1. Define proposal. Explain the circumstances under which it lapses. Marks : 16

ಪ್ರಸ್ತಾವನೆಯನ್ನು ವ್ಯಾಖ್ಯಾನಿಸಿರಿ. ಪ್ರಸ್ತಾವನೆ ರದ್ದಾಗುವ ಸಂದರ್ಭಗಳನ್ನು ವಿವರಿಸಿರಿ.

Q. No. 2. "An agreement without consideration is void". Explain this statement with exceptions, if any. Marks : 16

''ಪ್ರತಿಫಲವಿಲ್ಲದ ಒಂದು ಒಪ್ಪಂದ ಶೂನ್ಯವಾಗಿರುತ್ತದೆ''. ಈ ಹೇಳಿಕೆಗೆ ಅಪವಾದಗಳಿದ್ದರೆ ಅವುಗಳ ಸಹಿತ ಈ ಹೇಳಿಕೆಯನ್ನು ವಿವರಿಸಿರಿ.

Q. No. 3. "An agreement in restraint of trade is void". Explain this rule with exceptions, if any. Marks : 16

'ವ್ಯಾಪಾರವನ್ನು ನಿರ್ಬಂಧಿಸುವ ಒಪ್ಪಂದವು ಶೂನ್ಯ'. ಈ ನಿಯಮವನ್ನು ಅಪವಾದಗಳಿದ್ದರೆ ಅವುಗಳ ಸಹಿತ ವಿವರಿಸಿರಿ.

Q. No. 4. Explain the different modes of discharge of contract. Marks : 16

ಕರಾರು ವಿಸರ್ಜನೆಯ ವಿವಿಧ ವಿಧಾನಗಳನ್ನು ವಿವರಿಸಿರಿ.

P.T.O.

Q. No. 5. What is consent ? Under what circumstances consent is said to be not free ? Marks : 16

ಸಮ್ಮತಿ ಎಂದರೇನು ? ಯಾವ ಸಂದರ್ಭಗಳಲ್ಲಿ ಸಮ್ಮತಿಯು ಮುಕ್ತ ಸಮ್ಮತಿಯು ಆಗಿರುವುದಿಲ್ಲ ?

Q. No. 6. Explain the law relating to damages under Indian Contract Act. Marks : 16

ಭಾರತೀಯ ಕರಾರು ಅಧಿನಿಯಮದಡಿಯಲ್ಲಿ ದ್ರವ್ಯ ಪರಿಹಾರಕ್ಕೆ ಸಂಬಂಧಿಸಿದ ಕಾನೂನನ್ನು ವಿವರಿಸಿರಿ.

Q. No. 7. What is injunction ? Explain the different kinds of injunctions. Marks : 16

ನಿರ್ಬಂಧಕಾಜ್ಞೆ ಎಂದರೇನು ? ವಿವಿಧ ಬಗೆಯ ನಿರ್ಬಂಧಕಾಜ್ಞೆಗಳನ್ನು ವಿವರಿಸಿರಿ.

Q. No. 8. Write short note on **any two** of the following : Marks : 2×8=16

ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Minor's agreements.

ಅಲ್ಪವಯಸ್ಕರ ಒಪ್ಪಂದಗಳು.

(b) Contracts which are not specifically enforceable.

ನಿರ್ದಿಷ್ಟ ನೆರವೇರಿಕೆಯನ್ನು ಜಾರಿಗೊಳಿಸಲಾಗದ ಕರಾರುಗಳು.

(c) Appropriation of payment.

ಸಂದಾಯವಾದ ಹಣದ ವಿನಿಯೋಜನೆ.

Q. No. 9. Solve **any two** of the following problems : Marks : 2×10=20

ಈ ಕೆಳಗಿನವುಗಳಲ್ಲಿ ಬೇಕಾದ **ಎರಡು** ಸಮಸ್ಯೆಗಳನ್ನು ಪರಿಹರಿಸಿರಿ :

(a) 'X', the owner of a truck, agreed to sell it to 'Y' for Rs. 10 lakhs. But before sale, truck was destroyed in a fire accident. Hence, 'X' could not sell the truck to 'Y'. 'Y' instituted a suit against 'X' for breach of contract. Decide.

ಒಂದು ಲಾರಿಯ ಮಾಲಿಕನಾದ 'X'ನು ಆ ಲಾರಿಯನ್ನು ಹತ್ತು ಲಕ್ಷ ರೂಪಾಯಿಗಳಿಗೆ 'Y' ಎಂಬುವವನಿಗೆ ಮಾರಲು ಒಪ್ಪಿಕೊಳ್ಳುತ್ತಾನೆ. ಆದರೆ ಆ ಲಾರಿಯು ಮಾರಾಟದ ಮೊದಲೇ ಒಂದು ಅಗ್ನಿ ಅನಾಹುತದಲ್ಲಿ ನಾಶವಾಯಿತು. ಆದ್ದರಿಂದ 'X' ನು ಆ ಲಾರಿಯನ್ನು 'Y' ಗೆ ಮಾರಾಟ ಮಾಡಲು ಸಾಧ್ಯವಾಗಲಿಲ್ಲ. 'Y' ನು 'X' ನ ವಿರುದ್ಧ ಕರಾರಿನ ಉಲ್ಲಂಘನೆಗಾಗಿ ದಾವೆ ಹೂಡುತ್ತಾನೆ. ನಿರ್ಣಯಿಸಿರಿ.

(b) Ramesh promised to marry Radhika after the death of his father. However, during the lifetime of his father, Ramesh married Revati another woman. Radhika institutes a suit against Ramesh for breach of contract. Decide.

ರಮೇಶನು ತನ್ನ ತಂದೆ ಮೃತನಾದ ಮೇಲೆ ರಾಧಿಕಾಳನ್ನು ಮದುವೆಯಾಗುವುದಾಗಿ ಅವಳಿಗೆ ವಚನವನ್ನು ಕೊಟ್ಟನು. ಆದಾಗ್ಯೂ ರಮೇಶನು ತನ್ನ ತಂದೆಯು ಬದುಕಿರುವಾಗಲೇ ರೇವತಿ ಎಂಬ ಇನ್ನೊಬ್ಬ ಮಹಿಳೆಯನ್ನು ಮದುವೆಯಾದನು. ರಾಧಿಕಾಳು ರಮೇಶನ ವಿರುದ್ಧ ಕರಾರಿನ ಉಲ್ಲಂಘನೆಗಾಗಿ ದಾವೆ ಹೂಡುತ್ತಾಳೆ. ನಿರ್ಣಯಿಸಿರಿ.

(c) 'A' a minor, bought a watch on credit for Rs. 500/-. But later failed to pay the price. The seller sues 'A' for the recovery of price. Can he recover the price ? Decide.

'ಅ' ಎಂಬ ಅಪ್ರಾಪ್ತ ವಯಸ್ಕನು ಐದುನೂರು ರೂಪಾಯಿಗಳಿಗೆ ಒಂದು ವಾಚನ್ನು ಸಾಲವಾಗಿ ಖರೀದಿಸುತ್ತಾನೆ. ನಂತರ ಬೆಲೆಯನ್ನು ಕೊಡಲು ವಿಫಲನಾಗುತ್ತಾನೆ. ಮಾರಾಟಗಾರನು ಬೆಲೆಯ ಹಣವನ್ನು ವಸೂಲಿ ಮಾಡುವ ಸಲುವಾಗಿ 'ಅ'ನ ವಿರುದ್ಧ ದಾವೆಯನ್ನು ಹೂಡುತ್ತಾನೆ. ಅವನು ಬೆಲೆಯ ಹಣವನ್ನು ವಸೂಲಿ ಮಾಡಬಹುದೇ ? ನಿರ್ಣಯಿಸಿರಿ.

---